# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 159 |
| ಸದಸ್ಯರ ಹೆಸರು | ಡಾ:ಎಂ.ಜಿ.ಮುಳೆ |
| ಉತ್ತರಿಸುವ ದಿನಾಂಕ | 05.03.2025 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ತಿರುಪತಿಯಲ್ಲಿರುವ ಕರ್ನಾಟಕ ಭವನದಲ್ಲಿ ಕರ್ನಾಟಕದಿಂದ ಹೋಗುವ ಜನರಿಗೆ ವಸತಿ ಸೌಲಭ್ಯದಿಂದ ವಂಚಿತರಾಗುತ್ತಿದ್ದು, ಹೆಚ್ಚಿನ ವಸತಿ ಸೌಲಭ್ಯ ಒದಗಿಸಲು ಸರ್ಕಾರ ಕ್ರಮಕೈಗೊಳ್ಳುವುದೇ;</td>
<td>
ಆಂಧ್ರಪ್ರದೇಶದ ತಿರುಮಲ ಕ್ಷೇತ್ರಕ್ಕೆ ಕರ್ನಾಟಕ ರಾಜ್ಯದಿಂದ ಹೋಗುವ ಭಕ್ತಾಧಿಗಳಿಗೆ ಸರ್ಕಾರವು ಈ ಕೆಳಕಂಡಂತೆ ವಸತಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.
<table>
<tr><th>ಕ್ರ. ಸಂ.</th><th>ಕಟ್ಟಡಗಳ ವಿವರ</th><th>ಕೊಠಡಿಗಳ ವಿವರ</th></tr>
<tr><td>(1)</td><td>ಹಳೇಬೀಡು (ಕೆಪಿಎಸ್)</td><td>80 ಕೊಠಡಿಗಳು</td></tr>
<tr><td>(2)</td><td>ಹಂಪಿ ಬ್ಲಾಕ್</td><td>110 A/C ಕೊಠಡಿಗಳು</td></tr>
<tr><td>(3)</td><td>ಐಹೊಳೆ ಬ್ಲಾಕ್</td><td>12 ಡಾರ್ಮೆಟರಿಗಳು. 120 Non A/C ಕೊಠಡಿಗಳು</td></tr>
<tr><td>(4)</td><td>ಶ್ರೀ ಕೃಷ್ಣದೇವರಾಯ ಬ್ಲಾಕ್</td><td>36 VVIP ಕೊಠಡಿಗಳ ಕಟ್ಟಡದ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ</td></tr>
<tr><td>(5)</td><td>ಶ್ರೀ ಕೃಷ್ಣ ಒಡೆಯರ್ ಕಲ್ಯಾಣ ಮಂಟಪ</td><td>1000 ಆಸನಗಳ ಸಾಮರ್ಥ್ಯವುಳ್ಳ ಕಲ್ಯಾಣ ಮಂಟಪ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ.</td></tr>
</table>
ತಿರುಮಲದಲ್ಲಿ ಹಳೇಬೀಡು, ಹಂಪಿ ಮತ್ತು ಐಹೊಳೆ ಕಟ್ಟಡಗಳ ಕಾಮಗಾರಿಯು ಈಗಾಗಲೇ ಮುಕ್ತಾಯಗೊಂಡಿದ್ದು, ಯಾತ್ರಾರ್ಥಿಗಳಿಗೆ ಕೊಠಡಿಗಳನ್ನು ಹಂಚಿಕೆ ಮಾಡಲಾಗುತ್ತಿದೆ. ಸದರಿ ಕಟ್ಟಡಗಳ ಸ್ವಚ್ಛತಾ ನಿರ್ವಹಣೆಯನ್ನು ಹೊರ ಗುತ್ತಿಗೆಯ ಮುಖೇನ ನಿರ್ವಹಿಸಲಾಗುತ್ತಿದ್ದು, ಕರ್ನಾಟಕ ಜನರಿಗೆ ಲಭ್ಯವಾಗುವಂತೆ ಸದರಿ ಕೊಠಡಿಗಳನ್ನು ಆನ್‌ಲೈನ್ ಮೂಲಕ ಮುಂಗಡವಾಗಿ ಕಾಯ್ದಿರಿಸಿಕೊಳ್ಳಲು ಅನುವು ಮಾಡಲಾಗಿದೆ.
ಅಲ್ಲದೆ, ತಿರುಪತಿಗೆ ಸಮೀಪವಿರುವ ತಿರುಚಾನೂರಿನ ಶ್ರೀ ಪದ್ಮಾವತಿ ದೇವಾಲಯದ ಬಳಿ ಕರ್ನಾಟಕ ರಾಜ್ಯ ಛತ್ರವಿದ್ದು, ಸದರಿ ಕಟ್ಟಡದಲ್ಲಿ 02 ಕಲ್ಯಾಣ ಮಂಟಪ ಮತ್ತು 19 ಕೊಠಡಿಗಳಿದ್ದು, ಯಾತ್ರಾರ್ಥಿಗಳಿಗೆ ವಾಸ್ತವ್ಯಕ್ಕಾಗಿ ಹಂಚಿಕೆ ಮಾಡಲಾಗುತ್ತಿದೆ. ಸದರಿ ಕಟ್ಟಡದ ನವೀಕರಣ
</td>
</tr>
</table>

| | ಪ್ರಶ್ನೆ | ಉತ್ತರ |
|---|---|---|
| | | ಕಾಮಗಾರಿಗಾಗಿ ಮುಖ್ಯ ವಾಸ್ತುಶಿಲ್ಪಿಯವರಿಂದ ನಕ್ಷೆ ತಯಾರಿಕೆಯಾಗಿದ್ದು, ಪರಿಶೀಲನೆಯಲ್ಲಿರುತ್ತದೆ.<br><br>ಆಂಧ್ರಪ್ರದೇಶ ತಿರುಪತಿಯಲ್ಲಿ ಪ್ರಸ್ತುತ ಕರ್ನಾಟಕ ಭವನವಿರುವುದಿಲ್ಲ. ಆದರೆ, ಕರ್ನಾಟಕ ಸರ್ಕಾರದ 46 ½ ಸೆಂಟ್ಸ್ ಜಾಗದಲ್ಲಿ ಹೊಸದಾಗಿ ವಸತಿ ಸಂಕೀರ್ಣ /ಕರ್ನಾಟಕ ಭವನವನ್ನು ನಿರ್ಮಿಸಲು ನಕ್ಷೆಯನ್ನು ತಯಾರಿಸಿಕೊಡುವಂತೆ ಮುಖ್ಯ ವಾಸ್ತು ಶಿಲ್ಪಿಯವರಿಗೆ ಸೂಚಿಸಲಾಗಿರುತ್ತದೆ. |
| ಆ) | ಹೊಸದಾಗಿ ಕಟ್ಟಡ ನಿರ್ಮಿಸುವ ಆಲೋಚನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು? | ಸರ್ಕಾರದ ಆದೇಶ ಸಂಖ್ಯೆ:ಕಂಇ 07 ಮುಅಕಾ 2020 ದಿನಾಂಕ:30.06.2020ರನ್ವಯ, ತಿರುಮಲ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ಜಾಗದಲ್ಲಿ ಅತಿಥಿಗೃಹ, ಕಲ್ಯಾಣ ಮಂಟಪ ನಿರ್ಮಾಣ ಮತ್ತು ಇತರೆ ಸೌಲಭ್ಯಗಳನ್ನು ಕಲ್ಪಿಸುವ ಸಂಬಂಧ ರೂ.200-00 ಕೋಟಿಗಳ ವೆಚ್ಚದಲ್ಲಿ ಸಮಗ್ರ ಅಭಿವೃದ್ಧಿ ಯೋಜನೆಯ ಕಾಮಗಾರಿಗಳನ್ನು ಟಿಟಿಡಿಯವರ ಮೂಲಕ ನಿರ್ವಹಿಸಲಾಗುತ್ತಿದೆ.<br><br>ಈ ಯೋಜನೆಯ ಕಾಮಗಾರಿಗಳಲ್ಲಿ, 80 ಕೊಠಡಿಗಳ ಹಳೇಬೀಡು (ಕರ್ನಾಟಕ ಪ್ರವಾಸಿ ಸೌಧ) ಕಟ್ಟಡ ನವೀಕರಿಸಲಾಗಿರುತ್ತದೆ ಹಾಗೂ ಹೊಸದಾಗಿ, 110 ಕೊಠಡಿಗಳ ಹಂಪಿ ಬ್ಲಾಕ್ ಮತ್ತು 132 ಕೊಠಡಿಗಳ (12 ಡಾರ್ಮಿಟರಿ ಒಳಗೊಂಡಿರುತ್ತದೆ) ಐಹೊಳೆ ಬ್ಲಾಕ್ ಕಾಮಗಾರಿ ಪೂರ್ಣಗೊಂಡಿದ್ದು ಯಾತ್ರಾರ್ಥಿಗಳಿಗೆ ಹಂಚಿಕೆ ಮಾಡಲಾಗುತ್ತಿದೆ. ಉಳಿದಂತೆ, 36 VIP A/c ಕೊಠಡಿಗಳ ಶ್ರೀ ಕೃಷ್ಣದೇವರಾಯ ಬ್ಲಾಕ್ ಮತ್ತು 1000 ಆಸನಗಳ ಸಾಮರ್ಥ್ಯವುಳ್ಳ ಶ್ರೀ ಕೃಷ್ಣ ರಾಜೇಂದ್ರ ಕಲ್ಯಾಣ ಮಂಟಪ ಕಾಮಗಾರಿಯು ಪ್ರಗತಿಯಲ್ಲಿದ್ದು, ಪ್ರಸಕ್ತ ಸಾಲಿನ ಜೂನ್ ಮಾಹೆಯ ಅಂತ್ಯಕ್ಕೆ ಮುಕ್ತಾಯಗೊಳ್ಳುವ ಸಾಧ್ಯತೆಗಳಿರುತ್ತದೆ. |

ಸಂಖ್ಯೆ: ಕಂಇ 26 ಮುಸಪ್ರ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು